

ಹಿರಿಯ ನಾಗರಿಕರಿಗೆ ಆಸರೆ ಕೊಡುವ ವೃದ್ಧಾಶ್ರಮಗಳಿವೆ. ಅನಾಥಾಶ್ರಮಗಳೂ ಇವೆ. ಆದರೆ, ದೇವರಿಗಾಗಿ ವೃದ್ಧಾಶ್ರಮಗಳು ಎಲ್ಲಿವೆ ಹಾಗೂ ಆ ಆಶ್ರಮಗಳು ಯಾಕೆ ಬೇಕಾಗಿವೆ?

‘ನಾವು ಕಾಲೇಜ್ ಸ್ಟೂಡೆಂಟ್ಸ್. ಎಂಜಿನಿಯರಿಂಗ್ ಮಾಡುತ್ತಿದ್ದೇವೆ’ ಎಂದೆವು. ಅವರಿಗಾಗ ಸಂತೋಷ ಅಪ್ಪಿಷ್ಟಲ್ಲ.

ನಾನು ಸಣ್ಣವಳಿದ್ದಾಗ, ಅಂದರೆ ವಯಸ್ಸು ಸುಮಾರು ಏಳೋ ಎಂಟೋ ಇದ್ದಾಗ, ಪೂಜೆ ಮಾಡುತ್ತಿದ್ದ ಅಪ್ಪ ಅಮ್ಮನನ್ನು ಕೇಳಿದ್ದೆ: ‘ಪೂಜೆ ಯಾಕೆ ಮಾಡಬೇಕು?’. ಪೂಜೆ ಮುಗಿಸಿ ನನ್ನನ್ನು ಎದುರಿಗೆ ಕುಳ್ಳಿರಿಸಿಕೊಂಡು ಅಪ್ಪ ಅಮ್ಮ ಹೇಳಿದರು: ‘ಪೂಜೆ ಅಂದರೆ ನನಗೆ ಅದು ಕೊಡು, ಇದು ಕೊಡು ಅಂತ ದೇವರಲ್ಲಿ ಭಿಕ್ಷೆ ಬೇಡುವುದಲ್ಲ. ದೇವರು ನಮಗೆ ಏನೆಲ್ಲಾ ಕೊಟ್ಟಿದ್ದಾನೋ ಕೊಟ್ಟಿಲ್ಲವೋ ಅದಕ್ಕೆಲ್ಲ ಕೃತಜ್ಞತೆ ತೋರಿಸುವ ವಿಧಾನ ಈ ಪೂಜೆ. ದೇವರನ್ನು ಪೂಜಿಸುವ ಮೂಲಕ ಅಮ್ಮ ಅಪ್ಪನನ್ನು, ಹಿರಿಯರನ್ನು ಪೂಜಿಸುವುದನ್ನು, ಗೌರವಿಸುವುದನ್ನು ಕಲಿಯುತ್ತೇವೆ. ಪೂಜೆಯಿಂದ ತಾಳ್ಮೆ, ಸಹನೆ ಬೆಳೆಯುತ್ತದೆ. ದೇವರ ಫೋಟೊ ವಿಗ್ರಹಗಳಲ್ಲಿ ಅಪ್ಪ ಅಮ್ಮನನ್ನು, ಹಿರಿಯರನ್ನು ನೋಡಬೇಕು. ದೇವರಲ್ಲಿ ನಿನ್ನನ್ನು ನೋಡು. ನಿನ್ನ ಆತ್ಮ ಪರಮಾತ್ಮನಾಗುತ್ತಾನೆ!’

ಅಪ್ಪ ಅಮ್ಮನ ಮಾತು ನನಗೆ ಆಗ ಅರ್ಥವಾಗಲಿಲ್ಲ. ಈಗ ಆ ಮಾತುಗಳ ಅರ್ಥ ಬಿಚ್ಚಿಕೊಳ್ಳಯತ್ತಿದೆ; ಮನಸ್ಸು ಖೇದಗೊಳ್ಳುತ್ತದೆ.

ನನ್ನ ಅಜ್ಜ ಅಜ್ಜಿ ನಿವೃತ್ತ ಪ್ರಾಥಮಿಕ ಶಿಕ್ಷಕರು. ಹತ್ತಿರ ಹತ್ತಿರ ಇಬ್ಬರ ವಯಸ್ಸು ಎಪ್ಪತ್ತು ಎಪ್ಪತ್ತೈದರ ಮಧ್ಯೆ. ನಮ್ಮ ಅಪ್ಪ ಅಮ್ಮ ಇಬ್ಬರೂ ಪಿಎಚ್‌ಡಿ ಪಡೆದವರು, ಅಮೆರಿಕದಲ್ಲಿ ಓದಿ ಬಂದವರು. ಇಬ್ಬರೂ ಕಾಲೇಜು ಪ್ರೊಫೆಸರ್‌ಗಳು.

**‘ದೇವರ ಫೋಟೊಗಳಿಗೆ, ವಿಗ್ರಹಗಳಿಗೆ ಈ ದೇಗುಲದೊಳಗೆ ಪ್ರವೇಶವಿಲ್ಲ’; ಆದರೆ ‘ಬೆಳ್ಳಿ ಮತ್ತು ಬಂಗಾರದ ವಿಗ್ರಹಗಳನ್ನು ಮಾತ್ರ ಸ್ವೀಕರಿಸುತ್ತೇವೆ’**

ಅವರು ನನ್ನ ಅಜ್ಜ ಅಜ್ಜಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಅವರ ಜೊತೆ ಕೂತು ಊಟ ಮಾಡುತ್ತಾರೆ. ಒಟ್ಟಿಗೆ ವಾಕಿಂಗ್ ಹೋಗುತ್ತಾರೆ. ಅವರ ಜೊತೆ ಏನೇನೋ ಹಳೆಯ ವಿಷಯಗಳನ್ನು ಮಾತಾಡುತ್ತಿರುತ್ತಾರೆ. ಏನೇ ಮಾಡಿದರೂ ಅವರನ್ನು ಕೇಳಿಯೇ ಮಾಡುತ್ತಾರೆ. ಅವರನ್ನು ಮುಟ್ಟಿ ಮುಟ್ಟಿ ಮಾತನಾಡಿಸುತ್ತಾರೆ. ಅಜ್ಜ ಅಜ್ಜಿ ಆರೋಗ್ಯದಿಂದಿದ್ದಾರೆ. ಅವರದು ಸಂತೃಪ್ತಿ ಜೀವನ. ಅವರು ತಮ್ಮ ಮೊಮ್ಮಗಳೊಡನೆ, ಅಂದರೆ ನನ್ನೊಡನೆ ಜಾಲಿಯಾಗಿ ಕಾಲ ಕಳೆಯುತ್ತಾರೆ. ನನ್ನ ತುಂಟಾಟ ಇಷ್ಟಪಡುತ್ತಾರೆ.

ಅಪ್ಪ ಅಮ್ಮ ದೇವರುಗಳನ್ನು ಬೀದಿಗೆ ಬಿಸಾಡಿಲ್ಲ! ಅಜ್ಜ ಅಜ್ಜಿಯನ್ನು ವೃದ್ಧಾಶ್ರಮಕ್ಕೆ ತಳ್ಳಿಲ್ಲ! ನನ್ನ ತಾತನನ್ನು ಕೇಳಿದೆ: ‘ತಾತ, ನಮಗೆ ಬೇಡದ ದೇವರುಗಳನ್ನು ಏನು ಮಾಡುವುದು?’. ಅವರು ಹೇಳಿದರು: ‘ಮನೆಯ ದೇವರುಗಳ ಫೋಟೊಗಳು ಬೇಡದಿದ್ದರೆ, ಹಳೆಯದಾಗಿದ್ದರೆ, ವಯಸ್ಸಾಗಿದ್ದರೆ, ಹರಿದಿದ್ದರೆ, ಪೇಪರ್ ದೇವರುಗಳನ್ನು ಒಂದು ನೀರಿನ ಪಾತ್ರೆಯಲ್ಲಿ ರಾತ್ರಿಯೆಲ್ಲ ನೆನೆಸಿ, ಚೂರು ಚೂರು ಮಾಡಿ. ಆ ಚೂರುಗಳನ್ನು ಮನೆಯಂಗಳದ ಮಣ್ಣಿಗೆ ಸೇರಿಸಿ. ಮಣ್ಣಿನ ಮೂರ್ತಿಗಳಾಗಿದ್ದರೆ ನೀರಿನಲ್ಲಿ ಎರಡು ದಿನ ಮುಳುಗಿಸಿ ಮುಚ್ಚಿಟ್ಟು, ಕರಗಿಸಿ, ಮಣ್ಣಿಗೆ ಸೇರಿಸಿ. ಯಾವಾಗಲೂ ಬಯೋಡಿಗ್ರೇಡಬಲ್, ಅಂದರೆ ಬ್ಯಾಕ್ಟೀರಿಯಾಗಳಿಂದ ಜೀರ್ಣವಾಗಿ ಮತ್ತೆ ಮಣ್ಣಲ್ಲಿ ಮಣ್ಣಾಗುವ ಮೂರ್ತಿಗಳನ್ನೇ ಕೊಳ್ಳಿರಿ. ನಿಮಗೆ ಬೇಡದಿರುವಾಗ ಮತ್ತೆ ಮಣ್ಣಿಗೇ ಸೇರಿಸಬಹುದು. ದೇವರು ಕೋಪಿಸಿಕೊಳ್ಳುವುದಿಲ್ಲ! (ಮನೆಯ ಹಿರಿಯರನ್ನೂ ಹಾಗೆಯೇ ಮಾಡಬೇಡಿ!) ಬಣ್ಣದ ವಿಗ್ರಹಗಳೇ ಬೇಕೆಂದರೆ ಸಸ್ಯ ಬಣ್ಣ ಲೇಪಿತ ವಿಗ್ರಹಗಳನ್ನೇ ಕೊಳ್ಳಿರಿ. ಇದರಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲ. ತುಂಬಾ ದೇವರುಗಳನ್ನು ಮನೆಯಲ್ಲಿ ಇಟ್ಟುಕೊಳ್ಳಬೇಡಿ. ಬೇಕಿದ್ದರೆ ದೇವಾಲಯಕ್ಕೆ ಹೋಗಿ ಎಲ್ಲಾ ದೇವರಿಗಳಿಗೂ ನಮಸ್ಕಾರ ಮಾಡಿ ಬನ್ನಿ. ನಮಗೊಂದು ಅನಾಥಾಶ್ರಮ ಬೇಕಿದೆ ಎಂದು ದೇವರುಗಳು ಬೇಡಿಕೊಳ್ಳುವ ಪರಿಸ್ಥಿತಿ ಕಲ್ಪಿಸಬೇಡಿ.’

ಅಜ್ಜನ ಮಾತನ್ನು ಎಲ್ಲರೂ ಪಾಲಿಸಿದರೆ ದೇವರುಗಳಿಗೆ ವೃದ್ಧಾಶ್ರಮ ಬೇಕಾಗುವುದಿಲ್ಲ. ಮನೆಯಲ್ಲಿನ ದೇವರುಗಳು ಹೊರಗೆ ಹೋಗುವ ಪರಿಸ್ಥಿತಿಯೂ ಬರುವುದಿಲ್ಲ.

ಪ್ರತಿಕ್ರಿಯಿಸಿ: feedback@sudha.com